



ಮಳೆ ನೀರು ಇಂಗಿಸಲು ನಿರ್ಮಿಸಿದ ಕಂದಕ

ಉಷಾಕಿರಣದ ಬದಲಾದ ಪರಿಸರವನ್ನು ನೋಡಿದ, ಬೆಂಗಳೂರಿನಲ್ಲಿ ನೆಲೆಸಿರುವ ಸಾಗರ ಮೂಲದವರು ತಮ್ಮ ಪಿತ್ರಾರ್ಜಿತ ಒಣಭೂಮಿಯ ಒಂದು ಎಕರೆಯನ್ನು ಕಿರುಕಾಡನ್ನಾಗಿ ಪರಿವರ್ತಿಸಿದ್ದಾರೆ. ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊಫೆಸರ್ ಒಬ್ಬರು ಕಾಡು ಬೆಳೆಸಲೆಂದೇ ಉಷಾಕಿರಣದ ಹತ್ತಿರ ಐದೆಕರೆ ಜಾಗ ಕೊಂಡಿದ್ದಾರೆ. ಯುನೈಟೆಡ್ ಇನ್ಶೂರೆನ್ಸ್ ಕಂಪನಿಯಿಂದ ನಿವೃತ್ತಿ ಹೊಂದಿದ ಸಾಗರವಾಸಿಯೊಬ್ಬರು, ಲಾಭರಹಿತವಾಗಿ ಹಣ್ಣು ಹಂಪಲಿನ ಗಿಡಗಳನ್ನು ಬೆಳೆಸುವುದಕ್ಕಾಗಿ ಎರಡೆಕರೆ ಜಮೀನು ಹಸನು ಮಾಡುತ್ತಿದ್ದಾರೆ. ಇಡೀ ಮನುಕುಲಕ್ಕೆ ಒಳಿತಾಗುವಂತಹ ಈ ಕಾರ್ಯ ಕ್ರಮೇಣ ಜನರನ್ನು ಸೆಳೆಯುತ್ತಿದೆ.

'ಉಷಾಕಿರಣ' ಬರೀ ಹತ್ತು ವರ್ಷಗಳಲ್ಲಿ ಸಸ್ಯ ಮತ್ತು ಜೀವವೈವಿಧ್ಯದ ತವರಾಗಿದೆ. ನೂರಾರು ಪ್ರಭೇದದ ಸಸ್ಯಗಳು ಇಲ್ಲಿ ನಳನಳಿಸುತ್ತಿವೆ. ಬಂದವರಿಗೆ ಯಾವುದೇ ಶುಲ್ಕದ ಬರೆ ಹಾಕದೇ ಶುದ್ಧ ಗಾಳಿ ನೀಡುತ್ತಿವೆ. ಜೀವವೈವಿಧ್ಯ ಸಮೃದ್ಧವಾಗಿದೆ. ಕಪ್ಪೆ–ಓತಿಗಳ ಸಂಖ್ಯೆ ಸ್ವಾಭಾವಿಕವಾಗಿ ಹೆಚ್ಚಿದೆ. ಇವುಗಳನ್ನು ಅರಸಿಕೊಂಡು ಬರುವ ಬೇಟೆ ಪ್ರಾಣಿಗಳ ಸಂಖ್ಯೆಯೂ ಗಣನೀಯವಾಗಿದೆ ಹೆಚ್ಚಿದೆ. ಜೇಡಗಳ ಹತ್ತಾರು ಪ್ರಭೇದಗಳು ಎಲ್ಲೆಂದರಲ್ಲಿ ತಮ್ಮ ನೂಲಿನ ಚಿತ್ತಾರ ಬಿಡಿಸಿಕೊಂಡು ಕುಳಿತಿವೆ.

2018–19ನೇ ಸಾಲಿನಲ್ಲಿ ಹೂ ಬಿಟ್ಟು ಈ ಭಾಗದಲ್ಲಿ ಸಂಪೂರ್ಣ ಅಳಿದು ಹೋಗಿದ್ದ ಬಿದಿರು ಮತ್ತೆ ಈಗ ಆಳೆತ್ತರ ಬೆಳೆದು, ನೆಲಕ್ಕೆ ನೀರಿಂಗಿಸುತ್ತಿವೆ. ನೆಟ್ಟ ಕ್ಯಾಲಿಯಾಂಡ್ರ ಗಿಡಗಳ ಮಕರಂದ ಹೀರಲು ಬರುವ ಜೇನು–ದುಂಬಿಗಳು, ಚಿಟ್ಟೆ–ಪತಂಗಗಳು, ಹೂಹಕ್ಕಿಗಳು, ಪಿಕಳಾರ, ಚಿಟ್ಟು ಗಿಣಿ, ಕಾಜಾಣದ ನಡುವೆ ಬೆಳಗಿನ ಹೊತ್ತು ಪೈಪೋಟಿ ಏರ್ಪಡುತ್ತದೆ. ಇವು ಕಣ್ಣಿಗೆ ಮನೋಹರವಾಗಿ, ಕಿವಿಗೆ ಇಂಪಾಗಿ, ಇಹಲೋಕವನ್ನು ಮರೆಸಿ ಸ್ವರ್ಗಸದೃಶವಾಗಿಸುತ್ತವೆ. ಅಪರೂಪಕ್ಕೆ ನವಿಲಿನ ಕೇಕೆಯ ಜೊತೆಗೆ ನರಿಯ ಬಳ್ಳಿಕ್ಕುವಿಕೆ ಬೋನಸ್ಸು ನಿಮಗೆ ಸಿಗಬಹುದು.



ಮಳೆಗಾಲದಲ್ಲಿ ನೀರನ್ನು ಇಂಗಿಸಲು ಅಲ್ಲಲ್ಲಿ ಕಾಂಟ್ಯೂರ್ ಟ್ರೆಂಚ್‌ಗಳನ್ನು ತೆಗೆಸಲಾಗಿದೆ. ಓಡುವ ನೀರು ಇಲ್ಲಿ ನಿಲ್ಲುತ್ತದೆ. ಇಲ್ಲಿ ಬಳಸುವ ಪಂಪ್, ಲೈಟು ಹೀಗೆ ಎಲ್ಲಾ ಕೆಲಸಗಳಿಗೂ ಸೂರ್ಯನೇ ದೇವ. ಸೌರಶಕ್ತಿ ಮೂಲಕ ಬೇಕಾದಷ್ಟು ಶುದ್ಧ ಇಂಧನ ಇಲ್ಲಿ ಲಭ್ಯ. ಈ ಪ್ರದೇಶದಲ್ಲಿ ಇಂಗಾಲಾಮ್ಲ ಕಿಟ್ಟ ಹೊರಹೊಮ್ಮುವುದಿಲ್ಲ. ಎಲ್ಲವೂ ಶುದ್ಧ. ಪಶ್ಚಿಮಘಟ್ಟಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ ಎಲ್ಲಾ ಸಸ್ಯಪ್ರಭೇಧಗಳ ಶೋಕೇಸನ್ನಾಗಿ ರೂಪಿಸುವ ಮಹತ್ತರ ಯೋಜನೆ ಯಶಸ್ಸಿನ ಮೆಟ್ಟಿಲೇರುತ್ತಿದೆ. ಹಕ್ಕಿ–ಪ್ರಾಣಿಗಳಿಗೆ ನೀಗುವಷ್ಟು ಹಣ್ಣಿನ ಗಿಡಗಳು ಬೇರುಕೊಟ್ಟು ಬೆಳೆಯುತ್ತಿವೆ. ಅಕೇಶಿಯಾ ಹಾಗೂ ನೀಲಗಿರಿಗಳು ನಿಧಾನವಾಗಿ ಕಾಲುಕೀಳುತ್ತಿವೆ. ಒಂದು ಆರೋಗ್ಯಭರಿತ ಕಾಡು, ಎಲ್ಲವನ್ನೂ ಪೊರೆಯುತ್ತಾ, ಸಮಸ್ತ ಜೀವಜಾತಿಯನ್ನು ತನ್ನೊಳಗೆ ಪೋಷಿಸುತ್ತಾ, ಜೀವಶಾಸ್ತ್ರ, ಸಸ್ಯಶಾಸ್ತ್ರ ಕಲಿಯುವ ವಿದ್ಯಾರ್ಥಿಗಳಿಗೆ ಮಾದರಿಯಾಗುವತ್ತ ದಾಪುಗಾಲಿಕ್ಕಿದೆ.

ಹಾಂ! ನಿಮಗಿಲ್ಲಿ ಫ್ರೀ ವೈಫೈ ಸೌಲಭ್ಯ ಸಿಗುವುದಿಲ್ಲ. ಬದಲಿಗೆ ಕಾಜಾಣ–ಮಂಗಟ್ಟೆಗಳ ಸಂಗೀತ ಲಭ್ಯ. ಕಾಡಿನೊಳಗೆ ವಾಹನದ ಸೌಲಭ್ಯವಿಲ್ಲ. ಆದರೆ ನಡೆದರೆ ನಿಮ್ಮ ಇಡೀ ನರಮಂಡಲ ಮರುಚೈತನ್ಯವಾಗುವ ಖಾತ್ರಿ ಇದೆ. ಶುದ್ಧ ಹವೆ, ಶುದ್ಧ ನೀರು, ಶುದ್ಧ ವಾತಾವರಣ ನಮ್ಮ ಹಕ್ಕು. ಉಷಾಕಿರಣದಲ್ಲಿ ಇವೆಲ್ಲವೂ ಸಾಕಾರವಾಗುತ್ತಿದೆ ಎಂಬುದೇ ಹೆಮ್ಮೆ.

**ಸಂಸ್ಥೆ ವೆಬ್‌ಸೈಟ್: https://ushakirana.in**

**ಪ್ರತಿಕ್ರಿಯಿಸಿ: feedback@sudha.co.in**